

ಬೆಂಗಳೂರಿನ ತುರಹಳ್ಳಿ ಅರಣ್ಯಪ್ರದೇಶದಲ್ಲಿ ಕಿಡಿಗೇಡಿಗಳು ಹಚ್ಚಿರುವ ಕಿಚ್ಚು (ಸಂಗ್ರಹ ಚಿತ್ರ)

## ಅಮ್ಮನಂತೆ ಪ್ರೀತಿಸಿ

ಕಾಳ್ಗಿಚ್ಚು ಹತ್ತಿಕೊಳ್ಳದಂತೆ ತೆಗೆದುಕೊಳ್ಳಬೇಕಾದ ಮೊದಲ ಮುನ್ನೆಚ್ಚರಿಕೆಯೆಂದರೆ ಕಾಡನ್ನು ಅಮ್ಮನಂತೆ ಪ್ರೀತಿಸುವುದು. ಈ ಹಿನ್ನೆಲೆಯಲ್ಲಿ ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿಯೇ ಅರಣ್ಯ ಇಲಾಖೆಯು ವಿವಿಧ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಇಲಾಖೆಯಲ್ಲಿರುವ ವ್ಯವಸ್ಥೆಯನ್ನು ಬಲಪಡಿಸುವುದು ಒಂದು ಹಂತದ ಮುನ್ನೆಚ್ಚರಿಕೆಯಾದರೆ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಎರಡನೇ ಹಂತದ ಮುನ್ನೆಚ್ಚರಿಕೆ. ಎರಡನೇ ಹಂತದ ಮುನ್ನೆಚ್ಚರಿಕೆಯೇ ಅತ್ಯಂತ ಮುಖ್ಯವಾದುದು. ಆದ್ದರಿಂದ ಜನವರಿ ಮತ್ತು ಫೆಬ್ರುವರಿ ತಿಂಗಳಲ್ಲಿ ಕಾಡಂಚಿನ ಗ್ರಾಮಗಳ ಜನರಲ್ಲಿ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ಹೇಳುತ್ತಾರೆ 'ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ'ದ ನಿರ್ದೇಶಕಿ ದೀಪ್ ಜೆ. ಕಾಂಟ್ರಾಕ್ಟರ್.

ಈ ಬಾರಿ ಬಿಆರ್‌ಟಿ ಅರಣ್ಯದಂಚಿನ ಗ್ರಾಮಗಳ ಜನರಿಗೆ ಆರೋಗ್ಯ ತಪಾಸಣಾ ಕ್ಯಾಂಪ್‌ಗಳನ್ನು ಆಯೋಜಿಸಿ, ಬೆಂಕಿ ಅವಘಡವಾದಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳೇನು ಎಂಬುದನ್ನು ತಿಳಿಸಿಕೊಡಲಾಗಿದೆ. ಇಂತಹ ಮಾಹಿತಿಯಿಂದಾಗಿ ಜನರಿಗೆ ಕಾಡಿನ ಬೆಂಕಿಯು ತಮ್ಮದೇ ಜೀವಕ್ಕೆ ಹೇಗೆ ಕುತ್ತಾಗಬಹುದು ಎಂಬ ಅರಿವು ಮೂಡುತ್ತದೆ. ಬೀದಿ ನಾಟಕಗಳು, ಕಾರ್ಯಾಗಾರಗಳು ಕೂಡ ಕಾಡಿನ ಮಹತ್ವವನ್ನು ಸಾರುವುದಲ್ಲದೆ, ಅದರ ಜವಾಬ್ದಾರಿಯನ್ನು ಜನರು ಹೇಗೆ ವಹಿಸಿಕೊಳ್ಳಬೇಕು ಎಂಬುದನ್ನು ತಿಳಿಸಿಕೊಟ್ಟಿದೆ.

ಸಾಮಾನ್ಯವಾಗಿ ಕಾಳ್ಗಿಚ್ಚು ಆಪೋಷಣ ತೆಗೆದುಕೊಂಡ ಕಾಡಿನ ಪ್ರಮಾಣವೆಷ್ಟು ಎಂಬುದನ್ನು ಸ್ಥಳೀಯರೇ ಸ್ಪಷ್ಟವಾಗಿ ಅಂದಾಜು ಮಾಡಬಲ್ಲರು. ಬೆಳ್ತಂಗಡಿ ವಲಯದಲ್ಲಿ ಮಿಯಾರು ಗುಡ್ಡ, ಸಿಂಗಾಣಿ ಗುಡ್ಡ, ಉಪ್ಪಿನಂಗಡಿಯ ಶಿಶಿಲ ಅರಣ್ಯ, ಶಿವಾಜಿ ಬೆಟ್ಟ ಸೇರಿದಂತೆ ಸುಮಾರು 15 ಸಾವಿರ ಹೆಕ್ಟೇರ್ ವ್ಯಾಪ್ತಿಗೆ ಬೆಂಕಿ ಬಿದ್ದಿದೆ ಎಂದು ಸ್ಥಳೀಯರು ಹೇಳುತ್ತಾರೆ. ಅತ್ತ ಚಿಕ್ಕಮಗಳೂರಿನ ಮುಳ್ಳಯ್ಯನ ಗಿರಿಯನ್ನು ಸಂರಕ್ಷಿತ ಅರಣ್ಯವೆಂದು ಘೋಷಿಸಲು ರಾಜ್ಯ ಸರ್ಕಾರ ತಯಾರಿ ನಡೆಸುತ್ತಿರುವಾಗ, ಕಾಳ್ಗಿಚ್ಚು ಕ್ಯಾರೇ ಅನ್ನದೆ ಏಕರೆಗಟ್ಟಲೆ ಪ್ರದೇಶಕ್ಕೆ ವ್ಯಾಪಿಸಿದೆ.

'ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಹುಲಿ ರಕ್ಷಿತಾರಣ್ಯಗಳಿಗೆ ಸಂರಕ್ಷಣೆಯ ಕಾರ್ಯಕ್ಕಾಗಿ ಹಣ ಮೀಸಲಿಡುತ್ತದೆ. ಇದನ್ನು ಬಳಸಿಕೊಂಡು ಬೆಂಕಿಯಿಂದ ಕಾಡನ್ನು ರಕ್ಷಿಸಲು ಬೇಕಾದ ಕ್ರಮ ತೆಗೆದುಕೊಳ್ಳಬಹುದು. ಆದರೆ ರೆವೆನ್ಯೂ ಭೂಮಿಯೂ ಸೇರಿದಂತೆ, ಇತರ ಅರಣ್ಯಗಳಿಗೆ ಈ ಅನುದಾನ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರವು, ಬೆಂಕಿ ನಿರ್ವಹಣೆಗೆ ಮತ್ತು ಸಂರಕ್ಷಣೆಗಾಗಿ ಹಣವನ್ನು ಮೀಸಲಿಡಬೇಕಾಗುತ್ತದೆ' ಎಂದು ಚಿಕ್ಕಮಗಳೂರು ಗೌರವ ವನ್ಯಜೀವಿ ಪರಿಪಾಲಕ ವೀರೇಶ್ ಜಿ. ಹೇಳುತ್ತಾರೆ.

### ಕಾರಣಗಳೆಂಬ ಪಿಳ್ಳೆನೆವ

ಕಾಡಿನಲ್ಲಿ ನೈಸರ್ಗಿಕವಾಗಿ ಬೆಂಕಿ ಕಾಣಿಸಿಕೊಳ್ಳುವುದು ಹೌದಾದರೂ, ಅನೇಕ ಬಾರಿ ಮನುಷ್ಯರೇ ಸ್ವಾರ್ಥಕ್ಕಾಗಿ ಬೆಂಕಿ ಹಚ್ಚುವುದುಂಟು. ಕೆಲವೆಡೆ ತಮ್ಮ ಜಮೀನು ವಿಸ್ತರಣೆಗಾಗಿ ಬೆಂಕಿ ಹಚ್ಚಿದರೆ, ಮತ್ತೆ ಕೆಲವೆಡೆ ನಿರ್ಲಕ್ಷ್ಯವೇ ಕಾರಣವಾಗಿರುತ್ತದೆ. ಈ ಬಾರಿ ತಾಪಮಾನ ಏರಿಕೆಯ ದೆಸೆಯಿಂದ, ಮಾರ್ಚ್ ಮೊದಲ ವಾರದಲ್ಲಿಯೇ ಬಿಸಿಲಿನ ಪ್ರಖರತೆ ತೀವ್ರವಾಗಿದ್ದು, ಬಿಸಿಗಾಳಿಯು ಬೀಸಿದ್ದು, ಬೆಂಕಿಯನ್ನು ನಿಯಂತ್ರಿಸುವುದು ಕಷ್ಟವಾಯಿತು. ಇನ್ನು ನಮ್ಮ ಜೀವನಶೈಲಿಯೂ ಕಾಡಿನ ಬೆಂಕಿಗೆ ಮತ್ತೊಂದು ಕಾರಣ. ರಕ್ಷಿತಾರಣ್ಯದ ಒಳಗೆ ಪ್ರವಾಸಿಗರಿಗೆ ಅವಕಾಶ ನೀಡುವುದು, ಹೋಮ್‌ಸ್ಟೇ, ಹೋಟೆಲ್ ನಿರ್ಮಾಣದ ಕನಸುಗಳು ಬೆಂಕಿಯ ಮೂಲಗಳಾಗಬಹುದು.

ಕಾಡಿನೊಳಗೆ ಜೀವನ ಹೇಗಿರುತ್ತದೆ ಎಂಬ ಕುತೂಹಲ ಪೇಟೆಯ ಜನರಿಗೆ ಇರುತ್ತದೆ. ಪ್ರವಾಸೋದ್ಯಮ ಕ್ಷೇತ್ರವು ಈ ಕುತೂಹಲದ ಎಳೆ ಹಿಡಿದು ಅವಕಾಶಗಳನ್ನು ಸೃಷ್ಟಿಸಲು ಮುಂದಾಗುತ್ತದೆ. ಆದರೆ ಕಾಡಿನೊಳಗೆ ಪ್ರವಾಸೋದ್ಯಮಕ್ಕೆ ಅವಕಾಶ ಕೊಡುವುದರಿಂದ ಅನಾಹುತಗಳೇ ಜಾಸ್ತಿಯಾಗುತ್ತವೆ ಎನ್ನುತ್ತಾರೆ 'ಕಾಳಿ ಬ್ರಿಗೇಡ್'ನ ಸಂಚಾಲಕರಾದ ರವಿರೇಡ್ಕರ್.

ಪ್ರವಾಸೋದ್ಯಮದ ಮಾತು ಹಾಗಿರಲಿ, ಕೃಷಿ ಪದ್ಧತಿಯಲ್ಲಿಯೂ ನಾವು ಎಷ್ಟೊಂದು ಬದಲಾವಣೆ ಮಾಡಿಕೊಂಡಿದ್ದೇವೆ. ಆ ಬದಲಾವಣೆಗಳ ಪರಿಣಾಮಗಳನ್ನು ಮರೆಯುವಂತಿಲ್ಲ. ಪ್ರತೀ ಗುಡ್ಡದ ಬುಡದಿಂದ ಸಾಂಪ್ರದಾಯಿಕ ಕೃಷಿಕರು ಒಂದು ತೋಡನ್ನು ನಿರ್ಮಿಸಿ ನೀರನ್ನು ತಮ್ಮ ಕೃಷಿಗೆ ಹರಿಸುತ್ತಿದ್ದರು. ಈ ತೋಡುಗಳು ಗುಡ್ಡದ ತಪ್ಪಲಿನ ವಾತಾವರಣವನ್ನು ತಂಪಾಗಿ ಇರಿಸುತ್ತಿದ್ದವು. ವಾತಾವರಣದಲ್ಲಿ ನೀರಿನ ಅಂಶವು ಇರುತ್ತಿತ್ತು. ಗಿಡಗಳು ಹಸುರಾಗಿರುತ್ತಿದ್ದವು. ಆದರೆ ಈಗ ಗುಡ್ಡದ ತಪ್ಪಲಿನಿಂದ ನೀರನ್ನು ಪಿವಿಸಿ ಪೈಪ್‌ಗಳ ಮೂಲಕ ತಮ್ಮ ಕೃಷಿ ಜಮೀನಿಗೆ ಹರಿಸಲಾಗುತ್ತದೆ. ಅಂದರೆ ನೀರು ಹರಿಯುವ ಅಷ್ಟು ದೂರಕ್ಕೆ ನೀರಿನ ಪ್ರಭಾವವೇನೂ ದೊರೆಯುವುದಿಲ್ಲ. ತರಗೆಲೆಗಳು ಒಣಗಿಹೋಗಿರುತ್ತವೆ. ಕಾಡೊಳಗೆ ಅತಿಯಾದ ಕಾಮಗಾರಿ ನಡೆದು, ಬೇಸಿಗೆಯಲ್ಲಿ ಹರಿಯುವ ಅಮೃತಸದೃಶವಾದ ಝರಿಗಳೆಲ್ಲ ಮಾಯವಾಗುತ್ತಿವೆ. ಹಾಗಾಗಿ ಒಣಗುವ ಗಿಡಗಂಟಿಗಳು, ತರಗೆಲೆಗಳು ಬೆಂಕಿಯು ತಗುಲಿದ ಕೂಡಲೇ ಭಗ್ಗನೆ ಹೊತ್ತಿಕೊಳ್ಳಲು ಅನುಕೂಲಕರ ವಾತಾವರಣ ಸೃಷ್ಟಿಯಾಗುತ್ತದೆ.

ಅರಣ್ಯ ಇಲಾಖೆ ಸಿಬ್ಬಂದಿಯೊಡನೆ ಅಸಮಾಧಾನ ಹೊಂದಿರುವವರು ಸಿಟ್ಟಿನಿಂದ ಕಾಡಿಗೆ ಬೆಂಕಿ ಹಚ್ಚುವುದು, ಅರಣ್ಯ ಒತ್ತುವರಿ ಮಾಡುವ ಉದ್ದೇಶದಿಂದ ಬೆಂಕಿ ಹಚ್ಚುವುದು, ನಿರ್ಲಕ್ಷ್ಯದಿಂದ ಬೆಂಕಿ ಹತ್ತಿಕೊಳ್ಳುವುದು... ಹೀಗೆ ಮನುಷ್ಯನ ಕಾರಣದಿಂದಲೇ ಕಾಡಿಗೆ ಬೆಂಕಿ ಬೀಳುವುದೇ ಹೆಚ್ಚು.

ಸಿಟ್ಟಿನಿಂದಲೋ ನಿರ್ಲಕ್ಷ್ಯದಿಂದಲೋ ಮನುಷ್ಯ ಕಾಡಿಗೆ ಬೆಂಕಿ ತಾಗಿಸುತ್ತಾನೆ. ಆ ಬೆಂಕಿಯಲ್ಲಿ ಕಾಡಿನ ಜೊತೆಗೆ ನಾವೂ ಒಂದಲ್ಲಾ ಒಂದು ಬಗೆಯಲ್ಲಿ ಬೇಯುತ್ತೇವೆ ಎನ್ನುವ ಅರಿವು ಅವನಿಗಿರುವುದಿಲ್ಲ. ಕಾಳ್ಗಿಚ್ಚನ್ನು ಪ್ರತಿ ಬೇಸಿಗೆಯ ಸಮಸ್ಯೆ ಎಂದು ನೋಡಿದರೆ ಸಾಲದು; ಇದು ಮನುಷ್ಯನಿಗೆ ಸಂಬಂಧಿಸಿದ ಸಮಸ್ಯೆಯೂ ಹೌದು ಎಂದು ಯೋಚಿಸಿದಾಗಷ್ಟೇ ಬೆಂಕಿಯನ್ನು ನಿಯಂತ್ರಿಸುವ ದಾರಿಗಳು ನಿಚ್ಚಳವಾಗುತ್ತವೆ.

ಪ್ರತಿಕ್ರಿಯಿಸಿ: feedback@sudha.co.in